# ಆದೇಶ

ಸದರಿ ಅರ್ಜಿದಾರರ ಪರವಾಗಿ ದಿ.ಪ್ರ.ಸಂ.ಕ್ರಮಾದೇಶ 26 ನಿಯಮ 9 ರ ಜೊತೆ ಕಲಂ 151 ರಡಿ ಸದರಿ ಮಧ್ಯಂತರ ಅರ್ಜಿ 2 ಮತ್ತು 3 ನ್ನು ಸಲ್ಲಿಸಿ ಸದರಿ ದಾವಾ ಐಟಂ ನಂ. 1 ರಿಂದ 3 ರ ಸ್ವತ್ತುಗಳಲ್ಲಿ ಅರ್ಜಿದಾರರ ಹಿಸ್ಸೆಯನ್ನು ಪ್ರಾಥಮಿಕ ಡಿಕ್ರಿಯಂತೆ ವಿಭಾಗಿಸಿ ಸ್ವಾಧೀನಕ್ಕೆ ನೀಡುವ ಉದ್ದೇಶದಿಂದ ನ್ಯಾಯಾಲಯದ ನಿಯೋಗಿಗಳನ್ನು ನೇಮಕ ಮಾಡುವಂತೆ ಕೋರಿರುತ್ತಾರೆ.

1. ಅರ್ಜಿದಾರರು ತಮ್ಮ ಅರ್ಜಿಯ ಲಗತ್ತು ಪ್ರಮಾಣ ಪತ್ರದಲ್ಲಿ ತಾವು ಎದುರುದಾರರ ವಿರುದ್ಧ ದಾವಾಸ್ತಿಗಳಿಗೆ ಸಂಬಂಧಪಟ್ಟಂತೆ ಅ.ದಾ.ನಂ. 02/2017 ರಂತೆ ದಾವೆಯನ್ನು ಸಲ್ಲಿಸಿದ್ದು ಅದು ದಿನಾಂಕಃ 09-07-2018 ರಂದು ಡಿಕ್ರಿಯಾಗಿದ್ದು, ಅದರಂತೆ, ದಾವಾ ಐಟಂ ನಂ. 1 ಕೃಷಿ ಭೂಮಿಯಾಗಿದ್ದು, ದಾವಾ ಐಟಂ ನಂ. 2 ಮತ್ತು 3 ಖಾಲಿ ನಿವೇಶನಗಳಾಗಿದ್ದು, ಅದರಲ್ಲಿ ತಮ್ಮ ಹಿಸ್ಸೆಯನ್ನು ವಿಭಾಗಿಸಿ ನೀಡಲು ನ್ಯಾಯಾಲಯದ ನಿಯೋಗಿಯ ಅವಶ್ಯಕತೆ ಇರುತ್ತದೆ. ಆದ್ದರಿಂದ ಆ ಪ್ರಕಾರವಾಗಿ ಹಿಸ್ಸೆಯನ್ನು ವಿಭಾಗಿಸಿ ತಮ್ಮ ಸ್ವಾಧೀನಕ್ಕೆ ನೀಡುವಂತೆ ನ್ಯಾಯಾಲಯದ ನಿಯೋಗಿಯನ್ನು ನೇಮಿಸಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

2. ಸದರಿಯವರ ವಾದವನ್ನು ಆಲಿಸಲಾಯಿತು ಹಾಗೂ ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

3. ಸದರಿ ಅರ್ಜಿದಾರರು ಅ.ದಾ.ನಂ. 02/2017 ರಲ್ಲಿ ದಿನಾಂಕಃ 09-07-2018 ರಂದು ಆದ ಪ್ರಾಥಮಿಕ ಡಿಕ್ರಿಯ ಪ್ರಕಾರ ತನ್ನ ಹಿಸ್ಸೆಯನ್ನು ವಿಭಾಗಿಸಿ ಸ್ವಾಧೀನಕ್ಕೆ ನೀಡುವಂತೆ ಕೋರಿ ಅಂತಿಮ ಡಿಕ್ರಿಗಾಗಿ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಪ್ರಾಥಮಿಕ ಡಿಕ್ರಿಯಂತೆ ಸದರಿ ದಾವಾಸ್ತಿಗಳನ್ನು ವಿಭಾಗಿಸಿ ಅರ್ಜಿದಾರರ ಹಿಸ್ಸೆಯ ಅಂಶವನ್ನು ವಿಭಾಗಿಸುವ ಅವಶ್ಯಕತೆ ಇರುತ್ತದೆ. ಆ ಪೈಕಿ ದಾವಾ ಐಟಂ ನಂ. 1 ಕೃಷಿ ಭೂಮಿಯಾಗಿದ್ದು, ಸದರೀ ಸ್ವತ್ತನ್ನು ಅಳತೆ ಮಾಡಿ ಅರ್ಜಿದಾರರ ಹಿಸ್ಸೆಯನ್ನು ನೀಡಲು ತಾಲ್ಲೂಕು ಸರ್ವೆಯರನ್ನು ಕೋರ್ಟ್ ಕಮೀಷನರ್ ಆಗಿ ನೇಮಿಸುವ ಅವಶ್ಯಕತೆ ಇರುತ್ತದೆ. ದಾವಾ ಐಟಂ ನಂ. 2 ಮತ್ತು 3 ಖಾಲಿ ನಿವೇಶನಗಳಾಗಿದ್ದು ಸದರೀ ಸ್ವತ್ತನ್ನು ಅಳತೆ ಮಾಡಿ ಅರ್ಜಿದಾರರ ಹಿಸ್ಸೆಯನ್ನು ನೀಡಲು ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ಕೋರ್ಟ್ ಕಮೀಷನರ್ ಆಗಿ ನೇಮಿಸುವ ಅವಶ್ಯಕತೆ ಇರುತ್ತದೆ.ಆದ್ದರಿಂದ ಸದರಿ ದಾವಾಸ್ತಿಗಳಲ್ಲಿನ ಅರ್ಜಿದಾರರ ಹಿಸ್ಸೆಯನ್ನು ವಿಭಾಗಿಸಿ ಗುರುತಿಸುವ ಅವಶ್ಯಕತೆ ಇದ್ದು ಆದ್ದರಿಂದ ಸದರಿ ಅಂಶಗಳನ್ನು ಪಡಿಗಣಿಸಿ ಈ ಕೆಳಕಂಡಂತೆಃ

## ಆದೇಶ

ಸದರಿ ಅರ್ಜಿದಾರರು ದಿ.ಪ್ರ.ಸಂ.ಕ್ರಮಾದೇಶ **26** ನಿಯಮ **9** ರ ಜೊತೆ ಕಲಂ **151** ರಡಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಸದರಿ ದಾವಾಸ್ತಿಗಳನ್ನು ಪ್ರಾಥಮಿಕ ಡಿಕ್ರಿಯ ಪ್ರಕಾರ **1** ನೇ ದಾವಾಸ್ತಿಯನ್ನು ಅಳತೆ

ಮಾಡಿ ಅರ್ಜಿದಾರರ ಹಿಸ್ಸೆಯನ್ನು ನೀಡಲು ತಾಲ್ಲೂಕು ಸರ್ವೆಯರನ್ನು ಹಾಗೂ ದಾವಾ ಅನುಸೂಚಿ **2** ಮತ್ತು **3** ನೇ ಆಸ್ತಿಗಳನ್ನು ಅಳತೆ ಮಾಡಿ ಅರ್ಜಿದಾರರ ಹಿಸ್ಸೆಯನ್ನು ನೀಡಲು ಸಂಬಂಧಪಟ್ಟ ಪಂಚಾಯ್ತಿ ಅಬಿವೃದ್ದಿ ಅಧಿಕಾರಿಯನ್ನು ಕೋರ್ಟ್ ಕಮೀಷನರ್ ಆಗಿ ನೇಮಿಸಲಾಗಿದೆ.

ನ್ಯಾಯಾಲಯದ ನಿಯೋಗಿಗಳ ಶುಲ್ಕವನ್ನು ತಲಾ **1000-00** ರೂ ಗಳಿಗೆ ನಿಗದಿಪಡಿಸಲಾಗಿದೆ. ಸದರಿ ನಿಯೋಗಿಗಳ ಫೀ ಸಂದಾಯ ಮಾಡಲು ಹಾಗೂ ಕ್ರಮ ಕೈಗೊಳ್ಳಲು ದಿನಾಂಕಃ **07-04-2020** ರಂದು ಕರೆಯಿರಿ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ,
ಕೆ ಆರ್ ನಗರ.